# ಎನ್‌ಐಟಿಕೆಯಲ್ಲಿ 1981ರ ಬ್ಯಾಚ್‌ನ ಹಳೆಯ ವಿದ್ಯಾರ್ಥಿಗಳ ಸಮಾಗಮ
# 'ಒನ್ಸ್ ಅಪಾನ್ ಯೆ ಟೈಂ ಇನ್ ಕೆಆರ್‌ಇಸಿ' ಪುಸ್ತಕ ಬಿಡುಗಡೆ



**ಮಂಗಳೂರು:** ವಿಶ್ವದ ವಿವಿಧ ಭಾಗಗಳಲ್ಲಿ ನೆಲೆಸಿರುವ ಸುರತ್ಕಲ್ ನ ನ್ಯಾಷನಲ್ ಇನ್ ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕದ (ಆಗಿನ ಕೆಆರ್‌ಇಸಿ) 1981 ರ ಬ್ಯಾಚ್ ನ ಹಳೆಯ ವಿದ್ಯಾರ್ಥಿಗಳು ಜು.27ರಂದು ಮತ್ತೆ ಒಟ್ಟು ಸೇರುವ ಮೂಲಕ ಹಿಂದಿನ ದಿನಗಳನ್ನು ಮೆಲುಕು ಹಾಕಿ ಸಂಭ್ರಮಿಸಿದರು.

1970ರ ಬ್ಯಾಚ್ ವಿದ್ಯಾರ್ಥಿ ಎ.ಎಸ್. ಕಾರಂತ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಈ ಸಂದರ್ಭ ಮಾತನಾಡಿದ ಅವರು, ತಮ್ಮ ವೃತ್ತಿ ಜೀವನದ ಹಾದಿಯ ಮೇಲೆ ಎನ್‌ಐಟಿಕೆ ಶಾಶ್ವತ ಪ್ರಭಾವ ಬೀರಿದೆ. ಈ ಸಂಸ್ಥೆಯನ್ನು ಎಂದೂ ಮರೆಯುವಂತಿಲ್ಲ ಎಂದು ಆ ದಿನಗಳನ್ನು ಸ್ಮರಿಸಿದರು. ಎನ್‌ಐಟಿಕೆಯಲ್ಲಿ ಹಲವಾರು ಹಿರಿಯ ಆಡಳಿತಾತ್ಮಕ ಹುದ್ದೆಗಳನ್ನು ಅಲಂಕರಿಸಿದ 81ರ ಬ್ಯಾಚ್‌ನ ವಿದ್ಯಾರ್ಥಿಗಳಾದ ಪ್ರೊ.ಸೈದಟ್ಟಾ ಅವರು ಎನ್ ಐಟಿಕೆ ಆವರಣದಲ್ಲಿರುವ ಕನ್ನಡ ಮಾಧ್ಯಮ ಪ್ರಾಥಮಿಕ ಮತ್ತು ಪ್ರೌಢಶಾಲೆಗೆ ದೇಣಿಗೆ ನೀಡಿದರು.

**ಸ್ಮರಣಿಕೆ ಕೊಡುಗೆ**

ಇನ್ನೋರ್ವ ಹಳೆ ವಿದ್ಯಾರ್ಥಿ ಪದ್ಮಾನಂದ ವಾರಿಯರ್ ಅವರು ತಮ್ಮ ಹೆತ್ತವರಾದ ಯು. ಕೆ.ವಾರಿಯರ್ ಮತ್ತು ಭಾಗ್ಯಲಕ್ಷ್ಮಿ ವಾರಿಯರ್ ಅವರ ಸ್ಮರಣಾರ್ಥ ಹಾರ್ಟ್ ಹಬ್ ಅನ್ನು ಸಮರ್ಪಿಸಿದರು. ಎನ್‌ಐಟಿಕೆ ಸುರತ್ಕಲ್‌ನ ನಿರ್ದೇಶಕ ಪ್ರೊ.ಬಿ.ರವಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಈ ಸಂದರ್ಭ ಅವರು ಪದ್ಮಾನಂದ ವಾರಿಯರ್ ಸಂಪಾದಿಸಿದ ನೆನಪುಗಳು ಮತ್ತು ಕಥೆಗಳ ಸಂಗ್ರಹವಾದ 'ಒನ್ಸ್ ಅಪಾನ್ ಎ ಟೈಂ ಇನ್ ಕೆಆರ್‌ಇಸಿ' ಪುಸ್ತಕವನ್ನು ಲೋಕಾರ್ಪಣೆಗೊಳಿಸಿದರು. ಹಲವಾರು ಮಂದಿ ಹಳೆ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

Hosadigantha, Date: 01/08/24 p, 09